ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	509
ಸದಸ್ಯರ ಹೆಸರು	:	ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	16.09.2021.
ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ	ಆಟೋ ರಿಕ್ಷಾ ವಾಹನ ಚಾಲಕರು ಆ ವಾಹನಕ್ಕೆ ನಿಗಧಿಪಡಿಸಿದ ಪರ್ಮಿಟ್ ಅನ್ನು ಮೀರಿ ತಮ್ಮ ಸ್ವಂತ ಕೆಲಸಗಳಿಗಾಗಿ ಮನೆಯವರೊಡನೆ ಸ್ವಂತ ಊರಿಗೆ ಆಟೋ ರಿಕ್ಷಾದಲ್ಲಿ ತೆರಳಲು ಅನುಮತಿ ನೀಡಲಾಗಿದೆಯೇ ;	ಅನುಮತಿ ನೀಡಲಾಗಿಲ್ಲ. ಅನುಮತಿ ನೀಡಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.
ಆ	ಬೆಂಗಳೂರು ನಗರದಲ್ಲಿ ವಾಸವಾಗಿ ತಮ್ಮ ಸ್ವಗ್ರಾಮಗಳಿಗೆ ಅಂದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ ನೆಲಮಂಗಲ, ಕುಣಿಗಲ್ ರಸ್ತೆ ಯಂಟಗಾನಹಳ್ಳಿ ಟೋಲ್ ಪ್ಲಾಜಾ ಮತ್ತು ದಾಬಸಪೇಟೆಯ ಕೊರಟಗೆರೆ ಮುಖ್ಯ ರಸ್ತೆ ಹಾಗೂ ತುಮಕೂರು ಮುಖ್ಯ ರಸ್ತೆಯಲ್ಲಿ ಸಂಚರಿಸುವಾಗ ಟ್ರಾಫಿಕ್ ಪೊಲೀಸ್‌ರ ಹೊರತಾಗಿಯೂ ಸಿವಿಲ್ ಪೊಲೀಸ್ ರವರು ಸಹ ದಂಡ ವಸೂಲಿ ಮಾಡಬಹುದೇ;	ಸಂಚಾರ ನಿಯಮಗಳನ್ನು ಉಲ್ಲಂಘಿಸುವ ವಾಹನ ಚಾಲಕರುಗಳ ವಿರುದ್ದ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಸಿವಿಲ್ ಪಿ.ಎಸ್.ಐ ಮತ್ತು ಮೇಲ್ಪಟ್ಟ ದರ್ಜೆಯ ಅಧಿಕಾರಿಗಳು, ಹೆದ್ದಾರಿ ಗಸ್ತು ವಾಹನ ಮತ್ತು ಇಂಟರ್ ಸೆಪ್ಟರ್ ವಾಹನಗಳಲ್ಲಿ ಕರ್ತವ್ಯ ನಿರ್ವಹಿಸುವ ಎ.ಎಸ್.ಐ ರವರುಗಳೂ ಸಹ ಸಂಚಾರ ಪೊಲೀಸ್ ಹೊರತಾಗಿ ಅವರುಗಳ ಠಾಣಾ ವ್ಯಾಪ್ತಿಯಲ್ಲಿ ಸ್ಥಳದಂಡ ಮೊತ್ತವನ್ನು ವಿಧಿಸಲು ನಿಯಮಗಳಲ್ಲಿ ಅವಕಾಶವಿರುತ್ತದೆ.
ಇ	ದಂಡ ವಸೂಲಿ ನೆಪದಲ್ಲಿ ದುಡ್ಡು ವಸೂಲಿ ಮಾಡುತ್ತಿರುವುದರಿಂದ ಬಡ ಆಟೋ ರಿಕ್ಷಾ ಚಾಲಕರು ನಿತ್ಯ ಸಮಸ್ಯೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸಂಚಾರ ನಿಯಮಗಳನ್ನು ಉಲ್ಲಂಘಿಸುವ ಆಟೋ ರಿಕ್ಷಾ ಚಾಲಕರುಗಳ ವಿರುದ್ಧ ಮೋಟಾರು ವಾಹನ ಕಾಯ್ದೆ ಅಡಿಯಲ್ಲಿ ಸರ್ಕಾರವು ನಿಗಧಿ ಪಡಿಸಿದ ದಂಡ ಮೊತ್ತವನ್ನು ಮಾತ್ರ ವಸೂಲಿ ಮಾಡಲಾಗುತ್ತಿದ್ದು, ಉಳಿದಂತೆ ಯಾವುದೇ ಮೊತ್ತವನ್ನು ಆಟೋ ರಿಕ್ಷಾ ಚಾಲಕರುಗಳಿಂದ ವಸೂಲಿ ಮಾಡುತ್ತಿರುವುದಿಲ್ಲ.
ಈ	ಬಂದಿದ್ದಲ್ಲಿ ಈ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದ ಕ್ರಮಗಳೇನು ?	ಈ ಬಗ್ಗೆ ಆಟೋ ರಿಕ್ಷಾ ಚಾಲಕರವರುಗಳಿಂದ ಯಾವುದೇ ದೂರುಗಳು ಬಂದಿರುವುದಿಲ್ಲ. ಒಂದು ವೇಳೆ ದೂರುಗಳು ಬಂದಲ್ಲಿ ತಪ್ಪಿತಸ್ಥ ಪೊಲೀಸ್ ಅಧಿಕಾರಿ/ಸಿಬ್ಬಂಧಿಗಳ ವಿರುದ್ದ ನಿಯಮಾನುಸಾರ ಕ್ರಮವನ್ನು ಜರುಗಿಸಲಾಗುವುದು.

ಹೆಚ್‌ಡಿ ಎಸ್‌ಎಸ್‌ಟಿ 2021

೪೪

(ಆರಗ ಜ್ಞಾನೇಂದ್ರ)
ಗೃಹ ಸಚಿವರು